ಆದರೆ ಪ್ರಸ್ತುತ ಪ್ರಾಥಮಿಕ ಆರೋಗ್ಯ ಕೇಂದ್ರದ ಮಾದರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದೆ. ಈ ಕೇಂದ್ರದಲ್ಲಿ 02 ವೈದ್ಯಾಧಿಕಾರಿಗಳು ಮತ್ತು 17 ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಈ ಸಮುದಾಯ ಆರೋಗ್ಯ ಕೇಂದ್ರಕ್ಕೆ ಈ ಹಿಂದೆ 28 ಹುದ್ದೆಗಳು ಮಂಜೂರಾಗಿದ್ದು, ಹೆಚ್ಚುವರಿಯಾಗಿ 21 ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.

ಮೇಲ್ದರ್ಜೆಗೇರಿಸಿದ ಕಟ್ಟಡ ಕಾಮಗಾರಿ ಶೇಕಡ 60% ರಷ್ಟು ಪೂರ್ಣಗೊಂಡ ನಂತರ ಹೆಚ್ಚುವರಿ ಹುದ್ದೆಗಳನ್ನು ಭರ್ತಿ ಮಾಡಲು ಉದ್ದೇಶಿಸಲಾಗಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಸಿಬ್ಬಂದಿಗಳ ಕೊರತೆ

490(529); ಶ್ರೀ ಅಂಗಾರ ಎಸ್. (ಸುಳ್ಯ)

ಅ) ಸುಳ್ಯ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಗೊಳಪಟ್ಟ ಪುತ್ತೂರು ತಾಲ್ಲೂಕಿನ ಕಾಣಿಯಾರು, ಕ್ಯೊಲ, ನೆಲ್ಯಾಡಿ, ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಎಷ್ಟು ಜನ ವೈದ್ಯರು ಮತ್ತು ಸಿಬ್ಬಂದಿ ವರ್ಗಗಳು ಇರಬೇಕಿತ್ತು;

ಆ) ಈಗಿರುವ ಸಿಬ್ಬಂದಿಗಳೆಷ್ಟು; ಖಾಲಿಯಿರುವ ಹುದ್ದೆಗಳನ್ನು ಎಷ್ಟು ಸಮಯದಲ್ಲಿ ಭರ್ತಿ ಮಾಡಲಾಗುವುದು; (ಆರೋಗ್ಯ ಕೇಂದ್ರವಾರು ವಿವರ ನೀಡುವುದು)?

ಶ್ರೀ ಯು.ಟಿ. ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮತ್ತು ಆ) ವಿವರಗಳನ್ನು **ಅನುಬಂಧ–1** ರಲ್ಲಿ ನೀಡಲಾಗಿದೆ.

ಆರೋಗ್ಯ ಮತ್ತು ಕುಟುಂಬ ಇಲಾಖೆಯಲ್ಲಿ ಖಾಲಿಯಿರುವ 983 ತಜ್ಞ ವೈದರು, 331 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, 87 ದಂತ ಆರೋಗ್ಯಾಧಿಕಾರಿಗಳ ನೇಮಕಾತಿಯನ್ನು ವಿಶೇಷ ನಿಯಮಗಳನ್ನೂ ರೂಪಿಸಿ, ಯಾವುದೇ ಲಿಖಿತ ಪರೀಕ್ಷೆ ಹಾಗೂ ಮೌಖಿಕ

ಸಂದರ್ಶನವಿಲ್ಲದೇ, ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡುವ ಪ್ರಸ್ತಾವನೆಯನ್ನು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸಲ್ಲಿಸಲಾಗುತ್ತಿದೆ. ಆಯೋಗವು ಈ ವಿಶೇಷ ನಿಯಮಗಳ ರೀತ್ಯಾ 2–3 ತಿಂಗಳೊಳಗಾಗಿ ಆಯ್ಕೆ ಮಾಡಿ, ಆಯ್ಕೆ ಪಟ್ಟಿಯನ್ನು ಒದಗಿಸುವುದಾಗಿ ತಿಳಿಸಿರುತ್ತದೆ.

ಇಲಾಖೆಯಲ್ಲಿ ಖಾಲಿ ಇರುವ ಅರೆ ವೈದ್ಯಕೀಯ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ ನೇಮಕಾತಿ ಮಾಡುವ ಪ್ರಸ್ತಾವನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಪ್ರಸ್ತುತ 1582 ಗ್ರೂಪ್ "ಡಿ" ಹಾಗೂ 436 ವಾಹನಚಾಲಕರ ಹುದ್ದೆಗಳನ್ನು ನೇಮಕಾತಿ ಮಾಡುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

	ಕಾರವಾರ			ಕೋಲಾರ			ಬೆಳ್ಳಾರಿ		
ಹುದ್ದೆ	ಮಂಜೂರು	ಕಾರ್ಯನಿರತ	ಕೆರವು	ಮಂಜೂರು	ಕಾರ್ಯನಿರತ	ತರವು	ಮಂಜೂರು	ಕಾರ್ಯನಿರತ	ತರವು
ವೈದ್ಯಾಧಿಕಾರಿ	1	1	0	1	1	0	1	1	0
ಫ್ಲೆಬಸ	1	0	1	1	1	0	0	0	0
ಹಿಮಆಸ	1	0	1	1	0	1	1	1	0
ಹಿಮಆಸ	0	0	0	0	0	0	1	1	0
ಕಿಮಆಸ	2	0	2	4	1	3	4	1	3
ಕಿ.ಮ.ಆಸ.	4	4	0	7	6	1	7	7	0
ಪ್ರಶಾ.ಹು.	1	1	0	1	1	0	1	1	0
ಫಾರ್ಮಾಸಿಸ್ಟ್	1	1	0	1	0	1	1	0	1
ಪ್ಲೇ.ಆ.ಶಿ.	0	0	0	0	0	0	1	0	1
ಶುಶ್ರೂಷಕಿ	0	0	0	1	1	0	1	1	0
ದ್ವಿಬಸ	0	0	0	0	0	0	1	0	1
ವಾಹನ ಚಾಲಕ	0	0	0	0	0	0	1	0	1
ಗ್ರೂಪ್ ಡಿ	1	0	1	2	0	2	3	0	3
ಒಟ್ಟು	12	7	5	19	11	8	23	13	10